ಹೊರ ಬಂದ ನಾಗೇಶಪ್ಪನನ್ನು ಕಾಣುತ್ತಿದ್ದಂತೆ ಹೊಡೆಯಲೆಂದು ದೊಣ್ಣೆ ಬೀಸಿದ. ಮಾದೇವಿಯ ಬಲಿಷ್ಠ ಕೈಗಳು ನಾಗೇಶಪ್ಪನಿಗೆ ಏಟು ಬೀಳದಂತೆ ದೊಣ್ಣೆಯನ್ನು ತಡೆದವು. ಮಾದೇಶನ ರೋಷ ಮತ್ತಷ್ಟು ಏರಿತು. ಮತ್ತೂ ನಾಗೇಶಪ್ಪನ ಮೇಲೆ ಏರಲು ಮುಂದುವರಿದ. ಮಗನನ್ನು ಬಲವಾಗಿ ದೂರ ತಳ್ಳಿದ ಮಾದೇವಿ ಈ ವಿಷಯಕ್ಕೆ ತಲೆ ಹಾಕಬೇಡವೆಂಬಂತೆ ಮಾದೇಶನನ್ನು ಉರಿಗಣ್ಣಿಂದ ನೋಡಿದಳು. ಥೂ ಎಂದು ಕ್ಯಾಕರಿಸಿ ಉಗಿದ ಮಾದೇಶ, "ನಾನೇ ಯಲ್ಲಾರೆಡ್ಡಿನ್ನ ತಪ್ಪಾಗಿ ತಿಳ್ಕಂಡೆ ಈಟ್ದಿನ. ತೀಟೆ ತಡೀಲಾರ್ದೆ ಅಪ್ಪನ್ನ ಕೊಂದೋಳು ನೀನೇಯ. ಇನ್ನು ಇಲ್ಲೇ ಇದ್ರೆ ನನ್ನ ಬಿಟ್ಟೇಯ" ಎಂದು ಆವೇಶದಿಂದ ಹಲುಬುತ್ತಿದ್ದ ಮಗನನ್ನು ಜಗ್ಗಿ, "ಯಾವನ್ಲಾ ಅಂವ ಯಲ್ಲಾರೆಡ್ಡಿ? ಅವ್ನೆಂಡ್ತಿ ಮಲಿ ಕುಡ್ಡ್ ಬದ್ಕಂಡಿಯೇನ್ಲಿನು? ಈ ನಾಗೇಶಪ್ಪ ಇಲ್ದಿದ್ರೆ ನೀನೀಟೊತ್ತಿಗೆ ತಿರುಪೆ ಎತ್ಗಂಡು ಅಲೀತಿದ್ದೆ. ನಿನ್ನಪ್ಪ ಅವ ಮಾಡಿದ್ ಅನ್ಯಾಯಕ್ಕ ಸತ್ತ. ಒಂಟೋಗೋದೇ ಸೈ ಅನ್ಕಂಡಿದ್ರೆ ತೆಪ್ಗೆ ನಡಿ ಇಲ್ಲಿಂದ". ಮೈಮೇಲೆ ಮಾರವ್ವ ಬಂದಂತೆ ಆವೇಶದಿಂದ ತುಯ್ದಾಡಿದಳು ಮಾದೇವಿ. ಇನ್ನಷ್ಟು ಅವಮಾನದಿಂದ ಕುದಿಯುತ್ತ ಗಾವುದ ದೂರ ಹೋಗುವವನಂತೆ ದಾಪುಗಾಲಿಟ್ಟು ನಡೆದ ಮಾದೇಶ.

★★★

ಹೂವಿನ ಬುಟ್ಟಿ ಮುಂದೆ ಕೂತಿದ್ದ ಮಾದೇವಿ ಜನ ದೇವಸ್ಥಾನದ ದ್ವಾರದತ್ತ ಸುಳಿಯುತ್ತಿದ್ದಂತೆ ಮೊಲ್ಲೇ ಹೂವ ಎಂದು ಕೂಗುತ್ತಿದ್ದರೂ ತಲೆಯೊಳಗೆ ಮಂಜಂದೇ ಯೋಚನೆಯಾಗಿತ್ತು. ಮಂಜನಿಗೆ ಆ ಮೇಡಮ್ಮು ಬರುವ ಬೀದಿ ಕಡೆ ಗಮನ ಇಡಲು ಹೇಳಿದ್ದಳು. ಈ ಮಂಜನಿಗೂ ತನಗೂ ರುಣ ಇದ್ದಿದ್ದಕ್ಕೇ ತಾನು ಇಲ್ಲಿ ಬರುವಂತಾಗಿದ್ದು ಎಂದು ಅನಿಸುತ್ತಿತ್ತು ಮಾದೇವಿಗೆ. ಮಾದೇಸ ನಾಗೇಶಪ್ಪನ ವಿಚಾರದಲ್ಲಿ ಜಗಳ ಮಾಡಿ ಹೋದಂದಿನಿಂದ ನಾಗೇಶಪ್ಪ ಆ ದಾರಿಯಾಗಿ ಕಾಣಿಸಿಕೊಳ್ಳುವುದೇ ನಿಂತಿತ್ತು. ಮಾದೇವಿ ಅವನ ಬರುವಿಗಾಗಿ ಕಾದಳಾದರೂ ಹುಡುಕಿಕೊಂಡು ಹೋಗಲಿಲ್ಲ. ಮಾದೇಸನಿಗಾಗಿ ತಿಂಗಳುಗಳ ಕಾಲ ಕಾದರೂ ಆತನ ಸುಳಿವೂ ಇರಲಿಲ್ಲ. ಯಾಕೊ ಆ ಬೀದಿಯಲ್ಲಿದ್ದರೆ ಹೇನಿನಂತೆ ತಲೆ ತುಂಬ ಹಳವಂಡಗಳೇ ಓಡಾಡುತ್ತವೆ ಅನಿಸಿ ಮಾದೇವಿ ತನ್ನಂತೆ ಒಂಟಿ ಹೆಂಗಸರಿಬ್ಬರು ಸೇರಿ ಮಾಡಿಕೊಂಡ ಪಕ್ಕದ ಬೀದಿಯ ಮತ್ತೊಂದು ಶೆಡ್ಡಿಗೆ ಮೂರನೆಯವಳಾಗಿ ಹೋಗಿದ್ದಳು. ಮಗನ ನೆನಪಾಗಿ ಒಂದು ನಿಟ್ಟುಸಿರು ಹೊರ ಹಾಕಿದ ಮಾದೇವಿಯ ಕಣ್ಣು ಮತ್ತೆ ಮಂಜನತ್ತ ಹೊರಳಿತು. ಹುಡುಗು ಬುದ್ಧಿ. ಯತ್ಲಾಗಾದ್ರೂ ನೋಡ್ತಾ ನಿಂತ್ರೆ ಮೇಡಮ್ಮು ತಪ್ಪಿ ಹೋದೀತು. ಬೇಕಾದರೆ ಒಂದು ಮೊಳ ಹೂ ವ್ಯಾಪಾರ ಬಿಟ್ಟಾದರೂ ಸರಿಯೇ. ನಾನೇ ನೋಡ್ಡಬೇಕು ಅಂದುಕೊಂಡು ಬೀದಿ ತುದಿವರೆಗೆ ಕಣ್ಣು ಹಾಯಿಸಿದಳು. ಈಗ ನಾಲ್ಕಾರು ದಿನಗಳಿಂದ ಅದೇನೋ ರೋಗ ಹರಡ್ತಿದೆ ಅನ್ನೊ ಸುದ್ದಿ ಜೋರು ಜೋರಾಗಿ ಕಿವಿ ಮೇಲೆ ಬೀಳುತ್ತಿದ್ದುದಲ್ಲದೆ, ಕೆಲವರು ಮೂಗು–ಬಾಯಿ ಮುಚ್ಚಿಕೊಂಡು ಓಡಾಡಲು ಸುರು ಮಾಡಿದ್ದರು. ಮಂಜನಿಗೆ ಕೇಳಿದಾಗ ಅದೆಲ್ಲ ವಿಮಾನದಲ್ಲಿ ಬರೋರಿಗೆ ಮಾತ್ರ ಬರೋದಂತೆ ಅಂದಿದ್ದ. ಆಗಾಗ ಅಕ್ಕ ಪಕ್ಕದ ಮನೆಗಳವರು ನೀವು ಈ ತರ ಗಲೀಜು ಮಾಡೋದ್ರಿಂದ ನುಸಿಕಾಟ ಜಾಸ್ತಿಯಾಗಿ ಮಲೇರಿಯ ಬಂದಿದೆ ಎಂದೋ, ಡೆಂಗೆ ಜ್ವರ ಸುರುವಾಗಿದೆ ಎಂದೋ ಗಲಾಟೆ ಮಾಡುತ್ತಿದ್ದುದು ನೆನಪಾಗಿ ಅವಳಿಗೆ ಕಿಸಕ್ಕನೆ ನಗು ಬಂದಿತ್ತು. ಆದರೂ ಮುಖ ಮುಚ್ಚಿ ಓಡಾಡುವ ಜನ ಕಣ್ಣಿಗೆ ಬಿದ್ದಾಗ ಒಂದು ನಮೂನೆ ಅಂಜಿಕೆ. ಅವಳ ಯೋಚನೆಗಳಿಗೆ ಕತ್ತರಿ ಹಾಕುವಂತೆ ಮೇಡಮ್ಮು ತಿರುವಿಗಿಂತ ತುಸು ಮುಂದೆ ಬರುತ್ತಿರುವುದು ಕಂಡಿತು.

"ಓಯ್... ಮೇಡಮ್ಮೋರೇ..."

ಕರೆ ಕಿವಿಗೆ ಬಿದ್ದು ತಿರುಗಿ ನೋಡಿ ತನಗಲ್ಲವಿರಬಹುದೆಂದುಕೊಂಡು ಮೇಡಮ್ಮು ಅವಳ ಪಾಡಿಗೆ